
27 ಮಾರ್ಚ್ 2008
ಬೆಲೆ: ರೂ. 10
ಸುಧಾ
ಕಟ್ಟೆ
ಜಲ ಸಂಸ್ಕೃತಿ
ಹೊಸ ಪ್ರಯೋಗ
ಅಭಿವೃದ್ಧಿ ಪಥದಲ್ಲಿ
ಕಾಶ್ಮೀರ



[illegible]





ಕಾರ್ಮಿಕರ ಕೊರತೆ,
ಕೊಳವೆ ಬಾವಿಗಳ
ಕ್ರಾಂತಿಯಿಂದ
'ಕಟ್ಟ' ಕೌಶಲ
ನಿಧಾನವಾಗಿ
ಮರೆಯಾಗುತ್ತಿದೆ.
ಆದರೆ ಕೆಲವು
ಹೊಸ ಪ್ರಯೋಗಗಳೂ
ನಡೆಯುತ್ತಿವೆ.
ಮರಳ ಚೀಲದ
ಕಟ್ಟ ಹಾಗೂ
ಮಣ್ಣಿಗೆ ಬದಲು
ಪ್ಲಾಸ್ಟಿಕ್ ಬಳಸಿ
ರೂಪಿಸಿದ
'ಕಟ್ಟ'
ಯಶಸ್ಸಿನ
ಕಥೆಗಳು
ಇಲ್ಲಿವೆ.

ಚಿತ್ರ-ಲೇಖನ
ಶ್ರೀ ಪಡ್ರೆ

# ಮರೆಯಲ್ಲೇ ಉಳಿದ ಮರಳ 'ಕಟ್ಟ'

'ಕಟ್ಟ' ಕರಾವಳಿಯ ಕೃಷಿಗೆ ಜಲಸಂರಕ್ಷಣೆಯ ರಚನೆ ಮಾತ್ರವಲ್ಲ, ಅದೊಂದು ಸಂಸ್ಕೃತಿ. ಒಂದು ಕಾಲಕ್ಕೆ ಬಹುಜನಬಳಕೆ. ಕಲ್ಲಕಟ್ಟ, ಕಟ್ಟದಮೂಲೆ, ಕಟ್ಟ, ಕಟ್ಟದ ಕೋಡಿಸ್ಥಾನ, ನಡುಕಟ್ಟ, ಕಟ್ಟತಲೆ, ಬೆಂಟ್ರಕಟ್ಟ... ಈ ದೈವಮನೆತನದ ಹೆಸರುಗಳು ಹಿಂದೆ 'ಕಟ್ಟ'ಗಳಿಗಿದ್ದ ಮಹತ್ವಕ್ಕೆ ಸಾಕ್ಷಿ.

## ಸುತ್ತಲೆಲ್ಲ ಪ್ರಯೋಜನ

ಅಕ್ಕಪಕ್ಕದ ತೋಟಗಳಿಗೆ ನೀರಾವರಿಗೆ ನೀರು, ಅಡಿಮಣ್ಣಿಗೆ (sub soil) ತೇವಾಂಶ – ಕಟ್ಟಗಳ ಮೇಲ್ನೋಟದ ಪ್ರಯೋಜನ. ಅದರ ಫಲವಾಗಿ ಕಾಣಿಸುವುದು ಇಷ್ಟೇ ಅಲ್ಲ. ಹಳ್ಳದ ಹರಿವಿನ ಪಕ್ಕ, ಮೇಲೆ ಮತ್ತು ಕೆಳಗಿನವರೆಗೆ ನೀರ ಹಬ್ಬುವಿಕೆ,



ಬರೀ ಮರಳು, ಮಾಮೂಲಿ ಪ್ಲಾಸ್ಟಿಕ್ ಹಾಳೆಯ ದರ್ಬೆ ಕಟ್ಟ.

ಕೊಳವೆ ಬಾವಿಗಳಿಗೆ ಮರುಪೂರಣ, ಹಳ್ಳಗಳಿಗೆ ಅಡ್ಡವಾಗಿ ಕಟ್ಟುವ ತಾತ್ಕಾಲಿಕ ತಡೆಯೇ (checkdam) ಕಟ್ಟ. ಹರಿದು ಸಮುದ್ರ ಸೇರಿ ವ್ಯರ್ಥವಾಗುವ ನೀರನ್ನು ತಡೆಯುವುದು ಇದರ ಉದ್ದೇಶ. ಮಳೆಗಾಲಾನಂತರವೂ ಜಲಸಂರಕ್ಷಣೆ ಮಾಡುವ ದೊಡ್ಡ ಅವಕಾಶವಿದು.

"ಬೇಸಗೆಯಲ್ಲೂ ನೀರು ಬೇಕೆಂದರೆ, ಮಳೆಗಾಲದ ನಾಲ್ಕು ತಿಂಗಳ ಕಾಲ ನೀರನ್ನು ಜಮೀನುಗಳಲ್ಲಿ ಇಂಗಿಸಬೇಕು", ಹೀಗೆ ನಮ್ಮ ಹಿರಿಯರು ಹೇಳುತ್ತಿದ್ದರು. "ಒಂದು ವೇಳೆ ಇದು ಸಾಧ್ಯವಾಗದಿದ್ದರೆ, ನಮ್ಮ ತೋಡುಹೊಳೆಗಳಲ್ಲಿ ಕಟ್ಟ ಕಟ್ಟಿ ನೀರನ್ನು ನಾಲ್ಕು ತಿಂಗಳ ಕಾಲ ತಡೆಹಿಡಿದುಕೊಳ್ಳಿ. ಇದನ್ನೂ ಮಾಡದಿದ್ದರೆ, ಮುಂದಿನ ನಾಲ್ಕು ತಿಂಗಳು ನೀರು ಹುಡುಕುವುದು ಅನಿವಾರ್ಯ."

ಬಳಿಕ್ಕೆ ಬೀಳುವ ಸಾಧ್ಯತೆಗಳು, ಪಕ್ಷಿ ಸಂಕುಲ, ಅಲ್ಲಲ್ಲಿನ ಮಣ್ಣಿನ ಗುಣ, ಕಟ್ಟದ ನೀರಿನ ಪ್ರಮಾಣ ಅವಲಂಬಿಸಿ, 50 ಮೀಟರಿನಿಂದ ಐದು ಕಿಲೋಮೀಟರ್ ಸುತ್ತಳತೆಯ ಜಲಮೂಲಗಳಲ್ಲಿ ಇದು ನೀರಿನಂಶಕ್ಕೆ ಸೇರ್ಪಡೆಯಾಗುತ್ತದೆ. ಇವುಗಳ ರಚನೆಯಲ್ಲಿ ಸಾಮಾಜಿಕ ನ್ಯಾಯ ಮತ್ತು ಸುತ್ತಲಿನ ಜನಸಮುದಾಯಕ್ಕಿರುವ ಪರೋಕ್ಷ ಲಾಭವಿದೆ.

ದಶಕಗಳ ಹಿಂದೆ ದ.ಕ., ಕಾಸರಗೋಡು ಜಿಲ್ಲೆಗಳಲ್ಲಿ ಹಳ್ಳಿಗರು ಸಾವಿರಾರು ಕಟ್ಟಗಳನ್ನು ಸಹಕಾರ ತತ್ವದಿಂದ ಕಟ್ಟುತ್ತಿದ್ದರು. ಸ್ಥಳೀಯ ಲಭ್ಯ ಸಾಮಗ್ರಿಗಳಾದ ಗೆಲ್ಲು, ಸೊಪ್ಪು, ಕಲ್ಲು, ಮಣ್ಣುಗಳೇ ಕಟ್ಟದ ವಸ್ತುಗಳು. ಬರಬರುತ್ತಾ ಇದು ವಿದ್ಯುತ್ ಪಂಪು, ಕೊಳವೆಬಾವಿಗಳ ಆಗಮನ, ಪರಸ್ಪರ ಸಾಮರಸ್ಯದ ಮತ್ತು ಕೂಲಿ ಕೆಲಸಗಾರರ ಕೊರತೆಗಳಿಂದ ಕಣ್ಮರೆಯಾಯಿತು. ಸದ್ಯ ದಕ್ಷಿಣ

ಕನ್ನಡದ ಬೆಳ್ತಂಗಡಿ ತಾಲೂಕಿನ ಮಿತ್ತಬಾಗಿಲು ಮತ್ತು ಕಾಸರಗೋಡು ಜಿಲ್ಲೆಯ ಎಡನೀರು ಅದೇ ಸಾಮುದಾಯಿಕ ಹುರುಪು, ಬಾಂಧವ್ಯಗಳನ್ನು ಇನ್ನೂ ಉಳಿಸಿಕೊಂಡ ಪ್ರದೇಶಗಳು. 'ಕಟ್ಟ'ಗಳ ಮ್ಯೂಸಿಯಂ'ಗಳು.

ಹಾಗೆ ನೋಡಿದರೆ, ಬಿಸ್ಕತ್ತು ಕುಂದಲ್ಲಿ, ಮರಳ ಚೀಲದ ಗೋಡೆ ಕಟ್ಟುವುದು ಸಾರ್ವಜನಿಕ ಕಾಮಗಾರಿ ಇಲಾಖೆ ಹಿಂದಿನಿಂದಲೇ ಅನುಸರಿಸುತ್ತಾ ಬಂದ ಕ್ರಮ. ಆದರೆ, ಮರಳುಚೀಲದ ಕಟ್ಟ ಕಾಸರಗೋಡಿನ ಕೇರಳದ ದಕ್ಷಿಣ ಭಾಗದ ಕೊಂಡಗೆ ಅಲ್ಲಿ ಇದು ಹೊಸ ದಾರಿಯಲ್ಲ. ಉಪ್ಪುನೀರು ತಡೆಗೆ ಬಳಕೆಯಾಗುತ್ತಿದ್ದರೂ ಹಾಗೆ. ನೀರು ತಡೆಗಟ್ಟಲು ಕಟ್ಟುವಾಗ ನಮ್ಮ ರೈತರು ಇದಕ್ಕೆ ನಡುವೆ ಮಣ್ಣಿನ ಪದರ ನೀಡಿದರು. ಶ್ರೀಪಡ್ರೆ ಬದ್ಧೆಟಳಲ್ಲಿ ದುಪಂಚೆ.

ಮರಳ ಚೀಲದ ಕಟ್ಟದಲ್ಲಿ ಹಲವು ಅನುಕೂಲತೆಗಳಿವೆ. ಕಲ್ಲು ಬೇಡ. ಅದನ್ನು ಸಂಗ್ರಹಿಸಿ ಹೇರಲು ಬೇಕಾದ ಕೌಶಲ, ಶ್ರಮವೂ ಇದಕ್ಕೆ ಅಗತ್ಯವಿಲ್ಲ. ಮರಳು ಹತ್ತಿರ ಸಿಕ್ಕರೆ ಸಾಕು. ಹಳೆ ಚೀಲಗಳು 2-3 ರೂ.ಗೆ ಸಿಗುತ್ತವೆ. ಏರಿಯ ಕಾಲು ಇನ್ನವನ್ನೂ ಪಟ್ಟು ಕಮ್ಮಿ. ಕೂಲಿಯಲ್ಲೂ ಸ್ವಲ್ಪ ಉಳಿತಾಯ. ಹಳ್ಳದಲ್ಲಿ ಒಂದಷ್ಟು ಹರಿವು ಇದ್ದಾಗಲೂ ಕಟ್ಟಲು ಸಾಧ್ಯ. ಈ ಕಾರಣದಿಂದ ಕಳೆದೊಂದು ದಶಕದಿಂದ ಇವು ಜನಪ್ರಿಯವಾಗುತ್ತಾ ಬಂದಿವೆ.

ಇವನ್ನು ಕಟ್ಟುವುದಕ್ಕೆ ಕೆಲವು ರೀತಿರಿವಾಜುಗಳಿವೆ; 'ಮಾಡಿ ಮತ್ತು ಬೇಡ'ಗಳಿವೆ. ಆದರೆ ಇವನ್ನು ನೋಡಿ ಕಲಿಯಬಹುದು ಎನ್ನುತ್ತಾರೆ ಕಾಸರಗೋಡಿನ ಎಣ್ಮಕಜೆ ಪಂಚಾಯತ್ ಸದಸ್ಯ ಕೆ. ವಿಶ್ವನಾಥ ಕುಲಾಲ್. ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಇವರ ಉತ್ಸಾಹದಿಂದ ಈ ಬಾರಿ ಮೂರು ದೊಡ್ಡ ಮರಳಚೀಲದ ಕಟ್ಟಗಳು ಸಿದ್ಧವಾಗಿವೆ. ಈ ಕಾಮಗಾರಿ ಮಾಡಿದ್ದು ಈ ವರೆಗೆ ಇದರಲ್ಲಿ ಏನೂ ಅನುಭವವಿಲ್ಲದ ಹತ್ತು ಹೆಂಗಸರು. ಮೊದಲು ಕಟ್ಟ ಕಟ್ಟುವಾಗ ಅನುಭವಿ ಹಿರಿಯರ ಮಾರ್ಗದರ್ಶನ ಸಿಕ್ಕಿತ್ತು, ಅಷ್ಟೇ.

ಆದರೆ ನಡುವೆ ತುಂಬಿಸಲು ಪ್ರತಿ ವರ್ಷ ದೊಡ್ಡ ಪ್ರಮಾಣದ ಮಣ್ಣು ಬೇಕು. ಹಳ್ಳದ ಪಕ್ಕದಲ್ಲೆಲ್ಲಾ ತೋಟಗಳೇ. ಮಣ್ಣು ಸಿಗುವುದು ದುಸ್ತರ. ಬಾಂದಿಯಲ್ಲಿ ತರಲೂ ಸಾಧ್ಯವಿಲ್ಲ; ದಿಬ್ಬಗಳೇ ಇಲ್ಲ. ಮಣ್ಣಿಲ್ಲದೆ ಹೇಗೆ ಕಟ್ಟ ಕಟ್ಟುವುದು?

## ಮಣ್ಣಿಗೆ ಬದಲು ಪ್ಲಾಸ್ಟಿಕ್

ಅಣ್ಣನನ್ನದ ವಾರಣಾಸಿ ಕೃಷಿ ಫೌಂಡೇಶನ್ನಿನ ಡಾ. ವಾರಣಾಸಿ ಕೃಷ್ಣಮೂರ್ತಿ ಈ ನಿಟ್ಟಿನಲ್ಲಿ ಚಿಂತಿಸಿದರು. ಆಗ ಅವರಿಗೆ ಹೊಳೆದದ್ದು ಸಿಲ್ಪಾಲಿನ್ ಹಾಳೆ. ಇದು ಒಂದು ಥರದ ಪ್ಲಾಸ್ಟಿಕ್ಕೇ. ಅದರ ಅತಿ

'ಬೇಸಿಗೆಯಲ್ಲೂ ನೀರು ಬೇಕೆಂದರೆ, ಮಳೆಗಾಲದ ನಾಲ್ಕು ತಿಂಗಳ ಕಾಲ ನೀವಿಮ್ಮ ಜಮೀನುಗಳಲ್ಲಿ ನನ್ನನ್ನು ಹಿಡಿದಿಟ್ಟರೆ...'

ನೇರಳೆ ಕಿರಣ (ultra violet rays) ನಿರೋಧಕ. ಹಾಗಾಗಿ ಬಿಸಿಲಿನ ತಾಪಕ್ಕೆ ಹಾಳಾಗುವುದಿಲ್ಲ.

2003ರಲ್ಲಿ ಮೊಟ್ಟಮೊದಲಿಗೆ ವಾರಣಾಸಿ ಕಟ್ಟದಲ್ಲಿ ಮಣ್ಣಿನ ಒಳಗೆ ಸಿಲ್ಪಾಲಿನ್ ಹಾಳೆ ಬಳಸಿದರು. ಹೀಗೆ ಹೊಸ ಕಟ್ಟದ ಈ ಪ್ರಾಯೋಗಿಕ ಕಟ್ಟ ಯಶಸ್ವಿಯಾಯಿತು. ಮಣ್ಣಿನ ಅವಲಂಬನೆಯಿಲ್ಲದೆ ಮಾಡಿದ ಈ ಆವಿಷ್ಕಾರದಿಂದ ಕಟ್ಟ ನಿರ್ಮಾಣದಲ್ಲಿ ಒಂದು ಹೊಸ ಸಾಧ್ಯತೆಯನ್ನು ತೆರೆದುಕೊಟ್ಟಿತು.

ಕೃಷ್ಣಮೂರ್ತಿ ಗಣಪತಿಯ ಮನೆಯೊಡ್ಡನ ಕೆಲಸ ಮಾಡಿದ್ದಾರೆ. ಕೊಳವೆಬಾವಿ ತೋಡಿಸುವುದಕ್ಕಿಂತ ಕಟ್ಟ ಕಟ್ಟುವುದು ಉತ್ತಮ ಎನ್ನುವುದು ಅವರ ಅನುಭವ. "ಕಟ್ಟಗೆ ಹಾಕಿದ ಕೊಳವೆಬಾವಿಯ ನೀರಿಗಿಂತ ಹಾಕಿದ ಕೆರೆ, ಬಾವಿ, ಕಟ್ಟಗಳ ನೀರು ಎಷ್ಟೋ ಮೇಲು. ಮೇಲ್ಸ್ತರದಲ್ಲಿ ಸಿಗುವ ನೀರನ್ನು ಕೂಡಾ ಕೊಳವೆಬಾವಿ ಹೆಚ್ಚು ಆಳದಿಂದ ಕೆಳಗಿಂದ ಎಳೆದುಕೊಳ್ಳುತ್ತದೆ" ಎನ್ನುತ್ತಾರೆ.

ಈ ನಡುವೆ ಕೃಷ್ಣಮೂರ್ತಿ ನೆರೆಯ ಜಿಲ್ಲೆಯ ಕಟ್ಟಗಳನ್ನು ಸಂದರ್ಶಿಸಿ ಬಂದಿದ್ದರು. ಅವರು ಭೇಟಿ ಕೊಟ್ಟ ವರ್ಷ ಮೇ 1ಕ್ಕೆ, ೭ ಅಡಿ ಬೇಸಿಗೆಯಲ್ಲೂ ಕೊನೆಯ ಕಟ್ಟದಲ್ಲೂ ನೀರಿತ್ತು. ಒಂದರ ನಂತರ ಒಂದು ನದಿಗೆ ಕಟ್ಟಗಳನ್ನು ಕಟ್ಟಿದ್ದರ ಗುಣವಿದು ಎಂಬುದು ಮನದಟ್ಟಾಯಿತು. ಇದು ಕಟ್ಟಗಳ ಪ್ರಚಾರಕ್ಕೆ ಅವರನ್ನು ಇನ್ನಷ್ಟು ಪ್ರೇರೇಪಿಸಿತು.

ಕಟ್ಟದ ಹೊಸ ಪ್ರಯೋಗದ ಯಶಸ್ಸು ಕಂಡು ಕೃಷ್ಣಮೂರ್ತಿ ಈ ವಿಧಾನಕ್ಕೆ 'ವಾರಣಾಸಿ ವಿಧಾನ' ಎಂದು ಹೆಸರು ಕೊಟ್ಟರು. ಮಾತ್ರವಲ್ಲ, 'ನೀವೂ ಯಾಕೆ ಕಟ್ಟ ಕಟ್ಟಬಾರದು' ಎಂದು ಸುತ್ತಲಿನ ಕೃಷಿಕರನ್ನು ಪ್ರೇರೇಪಿಸಿದರು; ಸಭೆ ಸಂಘಟಿಸಿ ಸ್ಲೈಡ್ ತೋರಿಸಿ ಅನುಭವ ಹಂಚಿಕೊಂಡರು. ಊರಿನವರು ಹೊಸದ ಎಳೆಯದ ಬೆನ್ನು ತಟ್ಟಿದರು. ಮುಂದಿನ ವರ್ಷವೇ ಹೀಗೆ ಜೊತೆಗೆ ಇನ್ನೂ ನಾಲ್ಕು ರೈತ ಗುಂಪುಗಳು ಈ ಹೊಸ ರೀತಿಯ ಕಟ್ಟ ಕಟ್ಟಿದವು.

ವಾರಣಾಸಿಯವರ ಪ್ರೇರಣೆಯಿಂದ ಮರಳುಚೀಲದ ಕಟ್ಟ ಕಟ್ಟಲು ಆರಂಭಿಸಿದವರಲ್ಲಿ ದರ್ಬೆಯ ಶ್ರೀಪತಿ - ಬಾಲಕೃಷ್ಣರ್ ಜೊತೆಗೆ ಮುಡುಪ್ಪದ ಭಾಸ್ಕರ ಮಾಧವ ಭಟ್ಟರದೂ ಸೇರಿತ್ತು. ವರ್ಷದೊಳಗೆ ಹಿಂದೆ ಕೆಲ ವರ್ಷ ಕಟ್ಟ ಕಟ್ಟಿದ್ದರ ಗುಣ ನೋಡಿತ್ತು.





ಹೊಸ ಮರಳ ಕಟ್ಟದ ತಯಾರಿ. ಶ್ರಮದಾನದಿಂದ ಮಡಮೂಲಿ ಪ್ಲಾಸ್ಟಿಕ್ ಹಾಳೆ ಹೊದೆಸುತ್ತಿರುವ ವರ್ಷ ಕೃಷಿಕರ ತಂಡ. (ಚಿತ್ರ : ವಾರಣಾಸಿ ಆಗ್ರಿ ಫೌಂಡೇಶನ್)

2004ರಲ್ಲಿ ಇಲ್ಲಿ ಪುನರಾರಂಭವಾದ ಕಟ್ಟಗಳನ್ನು ಈಗಲೂ ಪ್ರತಿವರ್ಷ ಹಾಕುತ್ತಿದ್ದಾರೆ.

ಸಾಮಾನ್ಯವಾಗಿ ಒಮ್ಮೆ ಕಟ್ಟ ಕಟ್ಟಿ ಮುಗಿದಾಗ ಜನವರಿ ಹೊತ್ತಿನವರೆಗೆ 'ಅನ್ನಸ್ತ್ರಾ' ಲಭ್ಯವಾಗುತ್ತದೆ. ಕಾರ್ಮಿಕರ ಶಿಸ್ತು ಕೊರತೆ ಮತ್ತು ದೊಡ್ಡ ಆರ್ಥಿಕ ಹೊರೆ ಇದಕ್ಕೆ ಕಾರಣ. ಹಾಗೆ ನೋಡಿದರೆ ಹಿರೆ ಹೊಳೆಯ ಇಂಥ ದೊಡ್ಡ ಕಟ್ಟಗಳು ಕನಿಷ್ಠ ಆರೇಳು ಕೃಷಿ ಕುಟುಂಬ ಮತ್ತು 30 ರಿಂದ 200 ಎಕ್ರೆಗೆ ನೀರುಣಿಸಲು ನೀರೊದಗಿಸುತ್ತವೆ.

ಎಲ್ಲರೂ ಪಂಪ್, ಜನರೇಟರ್ ಹಾಕಿಕೊಂಡರೆ, ದೊಡ್ಡ ಹೊರೆ ಆಗುವುದಿಲ್ಲ. ಆದರೆ ಒಬ್ಬಿಬ್ಬರು ಹೋಗಾಡಿ ಕಟ್ಟ ಕಟ್ಟಿದರೆ ಕತ್ತಾ ಸಾಲವಾಗಿ ನೀರೆತ್ತುವವರೆಲ್ಲಾ ದೇಣಿಗೆ ಕೊಡುತ್ತಾರೆ ಎಂದೇನಿಲ್ಲ. ವಾರಣಾಶಿ ಮತ್ತು ಫಾಲೆಯವರ ಕಟ್ಟದ ವೆಚ್ಚವೆಲ್ಲಾ ಈ ಒಂದೊಂದು ಕುಟುಂಬಗಳೇ ವಹಿಸುತ್ತವೆ. ಹೀಗಾದಾಗ ಕೆಲವೊಮ್ಮೆ ಕಟ್ಟ ಕಟ್ಟುವುದೇ ನಿಂತು ಹೋಗುವುದೂ ಇದೆ. ಕಟ್ಟದಿಂದ ಒಂದೊಂದು ರೈತಕುಟುಂಬ ಪಡೆಯುವ ಪ್ರಯೋಜನವೇನೂ ಅದರ ಖರ್ಚು ದೊಡ್ಡದಲ್ಲ.



ಮಣ್ಣಿಗೆ ಬದಲು ಸಿಲ್ಪಾಲಿನ್ ಹಾಳೆ ಬಳಸಿದ ವಾರಣಾಶಿ ಕಟ್ಟ (ಚಿತ್ರ : ವಾರಣಾಶಿ ಅಗ್ರಿ ಫೌಂಡೇಶನ್)

## ಬೆಟ್ಟದಾ ಮೇಲಕ್ಕೂ...

ಕಟ್ಟದಲ್ಲಿ ನೀರು ತುಂಬಿದಾಗ ಆಸುಪಾಸಿನ ಕೆರೆ–ಬಾವಿಗಳಲ್ಲೂ ಜಲಮಟ್ಟ ಏರುವುದು ಹಲವರಿಗೆ ಗೊತ್ತು. ಆದರೆ ಕಿಲೋಮೀಟರ್‌ಗಟ್ಟಲೆ ದೂರ, ಎಷ್ಟೋ ಎತ್ತರದ ಗುಡ್ಡಗಳ ನೀರಾಶ್ರಯಗಳಲ್ಲೂ ಜಲಲಭ್ಯತೆ ಹೆಚ್ಚುವುದು ಗೊತ್ತೇ?

"ಹಿಂದೆ ನಾವು ಚಿಕ್ಕ ಕಟ್ಟ ಹಾಕುತ್ತಿದ್ದಾಗಲೇ ಬೋಗಿಮೂಲೆಯ ಶೇಷಕುಮಾರರಲ್ಲಿ ನೀರು ಹೆಚ್ಚಾಗುತ್ತಿದ್ದ ಬಗ್ಗೆ ಅವರು ಹೇಳುತ್ತಿದ್ದರು. ಅವರ ಜಮೀನು ನಮ್ಮ ಕಟ್ಟದಿಂದ ಒಂದು ಕಿಲೋಮೀಟರ್ ದೂರ, 150 ಮೀಟರ್ ಎತ್ತರ, ಗೊತ್ತೇ?", ವಸಂತಕುಮಾರ ಕೇಳುತ್ತಾರೆ. ಇಂಥ 'ಅಚ್ಚರಿಯ' ಉದಾಹರಣೆಗಳು ಹಲವು ಇವೆ. ಕಟ್ಟಗಳಲ್ಲಿ ಅಕ್ಷರಶಃ ಲಕ್ಷ ಕೋಟಿಗಟ್ಟಲೆ ಲೀಟರ್ ನೀರು ಕಿಲೋಮೀಟರ್ ಉದ್ದಕ್ಕೆ ಹರಡಿನಿಂತಾಗ ಈ ರೀತಿ ಇಕ್ಕೆಲದ ತೋಟ – ಗುಡ್ಡಗಳ ಕೆರೆ–ಬಾವಿಗಳಲ್ಲಾಗುವ ನೀರ ಹೆಚ್ಚಳವನ್ನು ಯಾರೂ ವೈಜ್ಞಾನಿಕವಾಗಿ ದಾಖಲಿಸಿದಂತಿಲ್ಲ. ಇದನ್ನು ಅರಿದುಕೊಂಡರೆ, ಈಗ 'ಬಾಡಿಗೆಯವರದು' ಎಂದು ಅಂದುಕೊಂಡ ಕಟ್ಟಗಳ ಮೇಲೆ ಸಮುದಾಯ ಪ್ರೀತಿ ಚಿಗುರಲೂಬಹುದು.



ಸಣ್ಣ ಕಟ್ಟಕ್ಕೂ ಮರಳ ಚೀಲ, ಪ್ಲಾಸ್ಟಿಕ್ ಹಾಳೆ ಬಳಸಬಹುದು. ಚಿತ್ರದಲ್ಲಿರುವಂತೆ ಕಟ್ಟದ ಬಸ್ಸಿಗೂ ಹೋಲಿಸಬೇಕೆಂದಿಲ್ಲ. (ಚಿತ್ರ : ವಾರಣಾಶಿ ಅಗ್ರಿ ಫೌಂಡೇಶನ್)

ಬೆಳ್ತಂಗಡಿ ತಾಲೂಕಿನ ಮಿತ್ತಬಾಗಿಲು ಮತ್ತು ಕಾಸರಗೋಡು ಜಿಲ್ಲೆಯ ಏತಡ್ಕ – 'ಕಟ್ಟಗಳ ಮ್ಯೂಸಿಯಂ'ಗಳು ಎನಿಸಿವೆ.



## ಬರೀ ಮರಳ ಕಟ್ಟ

ಕೆಲಸಗಾರರ ಅಭಾವದಿಂದ 2006ರಲ್ಲಿ ಮರಳ ಕಟ್ಟ ಆಗುವುದೇ ಇಲ್ಲ ಎನಿಸಿತ್ತು. ಈ ಸಮಯದ ಇಲ್ಲಿನ ಕಟ್ಟದ ಪಾಲುದಾರ ಮಹಾಬಲೇಶ್ವರರಿಗೆ ಒಂದು ಹೊಸ ಹೊಳಹು. ಗೋಣಿಯಲ್ಲಿ ಹುಡಿ ತುಂಬುವುದಕ್ಕೆ ಬದಲು ಹಿಟಾಚಿ ಯಂತ್ರ ಬಳಸಿ ಮರಳನ್ನೇ ರಾಶಿಗೂಡಿಸಿ ಪ್ಲಾಸ್ಟಿಕ್ ಹೊದೆಸಿದರೆ ಸಾಲದೇ. ಯಂತ್ರ ಬಳಸುವ ಕಾರಣ ಲೇಬರ್ ಕಡಿಮೆ ಸಾಕು.

ಈ ಚಿಂತನೆ ಅದೇ ವರ್ಷ ಕೃತಿಗಿಳಿಯಿತು. 'ಮಾರು' (diversion channel) ಕಟ್ಟದಲ್ಲಿ ಮಾತ್ರ ಮರಳುಚೀಲ ಬಳಕೆ. ಇದು ಕ್ರಮೇಣವಾಗಿ ಎಷ್ಟು ಜನಪ್ರಿಯವಾಯಿತೆಂದರೆ ಈ ವರೆಗೆ ಇಂತಹ ಒಟ್ಟು 9 ಕಟ್ಟಗಳು ಆಗಿವೆ. ಇನ್ನಷ್ಟು ಕೃಷಿಕ ಗುಂಪುಗಳನ್ನು ಸೆಳೆಯುತ್ತಿದೆ. ಕಳೆದ ವರ್ಷದಿಂದ ಕೃಷ್ಣಮೂರ್ತಿ ಕೂಡಾ ಇದೇ ವಿಧಾನ ಅನುಸರಿಸುತ್ತಿದ್ದಾರೆ. "ಇಂದಿನ ತೀವ್ರ ಕೂಲಿಕಾರರ ಅಭಾವದಲ್ಲೂ ಯಂತ್ರ ಬಳಸಿ ಕ್ಷಿಪ್ರ ನಿರ್ಮಾಣದ ಸಾಧ್ಯತೆಯಿಂದಾಗಿ ಇದರ ಉಪಯೋಗವನ್ನು ಇನ್ನೂ ಹಲವೆಡೆ ಪಡೆದುಕೊಳ್ಳಲು ಸಾಧ್ಯ" ಎನ್ನುತ್ತಾರೆ ಇವರು.

ಮರಳುಚೀಲ ಕಟ್ಟದ ಖರ್ಚು ತಗ್ಗಿಸಲು ದರ್ಬೆ ಗುಂಪು 'ಬಳಸಿ ಬಿಸಾಡುವ' ಪ್ಲಾಸ್ಟಿಕ್ಕನ್ನೇ ಬಳಸುತ್ತಿದೆ. ಸಿಲ್ಪಾಲಿನ್ ಹಾಳೆ ಬೇರೆ ಬೇರೆ ದಪ್ಪಗಳಲ್ಲಿ ಸಿಗುತ್ತದೆ. 'ನಿಲ್ಲಿಸುವ ನೀರಿನ ಪ್ರಮಾಣದ ಮೇಲೆ 125ರಿಂದ 250 ಜಿಎಸ್ಎಮ್ನವರೆಗಿನದು (gsm, grams per meter) ಸಾಕು' ಎನ್ನುತ್ತಾರೆ ಕೃಷ್ಣಮೂರ್ತಿ. ಎಚ್ಚರದಿಂದ ತೆಗೆದಿಟ್ಟರೆ ಇದು ಎರಡು ಋತುಗಳಿಗೆ ಬರುತ್ತದಂತೆ. 250 ಜಿಎಸ್ಎಮ್ನದಕ್ಕೆ ಈಗಿನ ರಖಂ ದರ ಚದರ ಅಡಿಗೆ 8 ರೂ. ಆದರೆ 'ಬಳಸಿ ಬಿಸಾಡುವ' ಪ್ಲಾಸ್ಟಿಕ್ಗೆ ಚದರ ಅಡಿಗೆ ಕೇವಲ ಒಂದು ರೂ.!

2003ರಲ್ಲಿ ಕಟ್ಟ ಕಟ್ಟುವಾಗ ಕೃಷ್ಣಮೂರ್ತಿ ನಡುನಡುವೆ ಮರಳುಚೀಲದ 'ಗುಜ್ಜ' (pillar) ಕಟ್ಟುತ್ತಿದ್ದರು. ಕಾಲಕ್ರಮದಲ್ಲಿ ಇದು ಇಲ್ಲದಿದ್ದರೂ ನಡೆಯುತ್ತದೆ ಎಂದು ಸ್ಪಷ್ಟವಾಯಿತು. 2003ರ ಮರಳ ಚೀಲದ ಕಟ್ಟಕ್ಕೆ 20 – 25 ದಿನ, 280 ಮಾನವ ದಿನ, 3500 ಖಾಲಿ ಗೋಣಿಗಳು ಮತ್ತು 45,000 ರೂ. ಖರ್ಚಾಗಿತ್ತು. ಆದರೆ ಈ ವರ್ಷದ ಬರೀ ಮರಳು, ಸಿಲ್ಪಾಲಿನ್ ಹಾಳೆಯದಕ್ಕೆ 40 ಮಾನವ ದಿನ, 500 ಪ್ಲಾಸ್ಟಿಕ್ ಚೀಲ, 50,000 ರೂ.





ವಸಂತಕುಮಾರ್ ಪರ್ವೆ

## ವಿಸ್ತರಣೆಗೆ ವಿಪುಲ ಸಾಧ್ಯತೆ

ಈ ವರೆಗೆ ಕಟ್ಟದ ಬಗೆ ಮರಳು ಮತ್ತು ಪ್ಲಾಸ್ಟಿಕ್ ಹಾಳೆಯ ಆರು ಕಟ್ಟಗಳಿಗೆ ಇದರ ಅನುಕೂಲಗಳ ವಸಂತಕುಮಾರ್ ಪರ್ವೆ ಅವರದೇ ಮಾರ್ಗದರ್ಶನ. "ಈಗ ಬೈನರ್ ಬಂದಿದೆ. ಇಲಾಖೆಯವರು ಕರೆದರೆ, ಬೇಕೆಂದರೆ, ಬೇಕಾದಾಗ ನಮಗೂ ಹಾಕಿಕೊಂಡಲ್ಲಿ" ಎನ್ನುತ್ತಾರೆ ವಸಂತ ನಗುನಗುತ್ತಾ.

"ಈ ಕಟ್ಟದಲ್ಲಿ ಲೇಬರ್‌ನಲ್ಲಿ ಅಂದಾಜು 40% ಉಳಿತಾಯವಿದೆ. ಪ್ಲಾಸ್ಟಿಕ್ ಗೋಣಿಗಳ ಖರ್ಚು ಇಲ್ಲ. ಆದರೆ ಮರಳು ಹತ್ತಿರವೇ ಸಿಗುವಂತಿರಬೇಕು. ಹಳ್ಳದಿಂದ ಚೆನ್ನಾಗಿ ತೊಳೆಯಬೇಕು. ಬಂಡೆಕಲ್ಲು ಸಿಕ್ಕರೆ ಉತ್ತಮ. ಇಲ್ಲದಿದ್ದರೆ ಒಳ್ಳೆ ಮಣ್ಣು ಸಿಗುವಲ್ಲಿವರೆಗೂ ಅಗೆಯಬೇಕು. ಮರಳಿನಂತೆ ಇರುವಲ್ಲಿಂದ ಕಟ್ಟದಡಿ ನೀರು ನಿಲ್ಲದು. ಕಟ್ಟ ಹತ್ತಡಿ ಎತ್ತರಕ್ಕೆ ಕಟ್ಟುವುದಾದರೆ ಬೇರಿರುವ ಮರಗೋಣಿಯ ತಳಭಾಗದ ಅಗಲ ಇಪ್ಪತ್ತು ಅಡಿ ಇರಬೇಕು".

ಈ ಬಾರಿ ಬೈಲಾಡಿ ಕಿಂಡಿ ಅಣೆಕಟ್ಟಿನ ಕಿಂಡಿ ಕಟ್ಟುವ ಬದಲು ರೈತರು ಹತ್ತಿರದಲ್ಲೇ ಬಗೆ ಮರಳ ಕಟ್ಟ ಕಟ್ಟಿದ್ದಾರೆ. ಕಿಂಡಿ ಅಣೆಕಟ್ಟಿನ ಪ್ರತಿವರ್ಷದ ನಿರ್ವಹಣೆಯ ಖರ್ಚಿನಲ್ಲಿ ಅದರಷ್ಟು ನೀರು ನಿಲ್ಲುವಂತೆ ಈ ತಾತ್ಕಾಲಿಕ ಕಟ್ಟ ಕಟ್ಟಬಹುದು ಎನ್ನುತ್ತಾರೆ ಇವರು. ಈ ಕೃಷಿಕ ಅನುಕೂಲಕ್ಕಾಗಿ ದೊಡ್ಡ ಕಟ್ಟಗಳಿಗೆ, ಹೆಚ್ಚು ಮಳೆ ಬೀಳುವ ಮಲೆನಾಡಿಗೆ ಮಾತ್ರ ಸೀಮಿತವಾಗಬೇಕಿಲ್ಲ. ಸಣ್ಣ ಚಿಕ್ಕ ಕಟ್ಟಗಳನ್ನೂ ಈ ವಿಧಾನದಿಂದ ರಚಿಸಬಹುದು. ಬಯಲು ಸೀಮೆಯಲ್ಲೂ ಇದರ ಉಪಯೋಗ ಪಡೆಯಲು ಸಾಧ್ಯ. ಮಣ್ಣು ಸಿಗುವುದು ಸಮಸ್ಯೆಯಾಗಿರುವಲ್ಲಿ ಪ್ಲಾಸ್ಟಿಕ್ ಶೀಟ್ ಹೊದೆಸಬಹುದು.

"ಮಲೆನಾಡಿನ ಹೊಳೆಗಳಲ್ಲಿ ಕಿಲೋಮೀಟರಿಗೊಂದರಂತೆ ಈ ರೀತಿಯ ಕಟ್ಟ ಕಟ್ಟಬೇಕು. ಒಂದು ಕಡೆಯಿಟ್ಟ ನೀರು ಮುಗಿಯುವಲ್ಲಿ ಇನ್ನೊಂದು ಕಟ್ಟ. ಮಂಗಳೂರಿನವರು ಬೇಸಿಗೆಯಲ್ಲಿ ಕುಡಿಯುವ ನೀರಿಗೆ ಕಷ್ಟ ಪಡುತ್ತಾರೆ. ನೇತ್ರಾವತಿ ನದಿಯಲ್ಲಿ ಇಂಥಾ ಒಂದೆರಡು ಕಟ್ಟ ಕಟ್ಟಿಕೊಂಡು ಈ ಬವಣೆ ನಿವಾರಿಸಬಹುದು" ಎಂದು ವಸಂತಕುಮಾರ್ ಸೂಚಿಸುತ್ತಾರೆ.

ಕೃಷ್ಣಮೂರ್ತಿ ಈ ಮಾತನ್ನು ಪೂರ್ತಿ ಒಪ್ಪುತ್ತಾರೆ. "ನಮ್ಮ ನದಿಗಳಿಗೆ ಅಲ್ಲಲ್ಲಿ ಇಂಥ ಕಟ್ಟ ಹಾಕಿ ಬೇಸಿಗೆಯಲ್ಲಿ ವಿಹಾರಕ್ಕಾಗಿ ಬೋಟಿಂಗ್ ಕೂಡಾ ಮಾಡಬಹುದು. ನದಿಗೆ ಕಟ್ಟ ಬಂದರೆ ಸುತ್ತಲಿನ ಇಡೀ ಜನತೆಗೆ ಪ್ರತ್ಯಕ್ಷ-ಪರೋಕ್ಷ ಲಾಭ ಆಗುತ್ತೆ" ಎನ್ನುವುದು ಅವರ ಅನಿಸಿಕೆ. ಸುಧಾರಣೆ ಆಗಬೇಕಾದ ಅಂಶಕ್ಕೆ ಅವರು ಬೊಟ್ಟು ಮಾಡುವುದು ಹೀಗೆ: "ಮಾದರಿಯ ವಿನ್ಯಾಸ ಇನ್ನೂ ಸುಧಾರಣೆ ಆಗಬೇಕು. ಅಷ್ಟಾಗಿ ಮೇಲಿನ ಕಟ್ಟದಿಂದ ನೀರುಕ್ಕಿ ಬಂದರೆ ನಮ್ಮ ಕಟ್ಟವಿಡೀ ಒಡೆದು ಹೋಗದಂತೆ ಇಂಥ ಭದ್ರ ವಿನ್ಯಾಸ ರೂಪಿಸಬೇಕು".

"ಸರಕಾರ, ಇಲಾಖೆಗಳ ಪ್ರೋತ್ಸಾಹದ ಕೊರತೆಯಿಂದ ರಾಜ್ಯದ ಹಲವೆಡೆಗೆ ಸೂಕ್ತವಾಗಿರುವ ಈ ತಂತ್ರಜ್ಞಾನ ಇನ್ನೂ ಮರೆಯಲ್ಲೇ ಉಳಿದಿದೆ. ಶಿರಸಿನ ಪರಸಾಲು, ಮದ್ದೂರು ಪಂಚಾಯತುಗಳು ಕಟ್ಟಗಳಿಗೆ ಪ್ರೋತ್ಸಾಹಧನ ಕೊಡುತ್ತಿವೆ. ನಮ್ಮಲ್ಲೂ

### ರೂ.ಗೆ 2.25 ಸಾವಿರ ಲೀಟರ್

**ವಾರಣಾಸಿಯವರ ಪರಪು ಕಟ್ಟ ಎರಡೂವರೆ ಕಿಲೋಮೀಟರ್ ದೂರದವರೆಗೆ ನೀರನ್ನು ತಡೆಹಿಡಿಯುತ್ತದೆ. ಸುಮಾರು 200 ಎಕ್ರೆಗೆ ನೇರ ಪ್ರಯೋಜನ. ಇದಕ್ಕೂ ಹೆಚ್ಚಿನ ಜಮೀನಿಗೆ ಪರೋಕ್ಷ ಗುಣ. ಸುತ್ತಲಿನ 20-30 ಬಡ ಕುಟುಂಬಗಳಿಗೆ ದೊಡ್ಡ ಉಪಕಾರ. ಇವರಿಗೆ ಹಿಂದೆ ಬೇಸಿಗೆಯಲ್ಲಿದ್ದ ಹೊಳೆಯಲ್ಲಿ ಹೊಂಡ ತೋಡಿ ನೀರು ಒಯ್ಯುವ ಸಾಹಸ ಈಗ ಇಲ್ಲ. 2006ರಲ್ಲಂತೂ ಮಳೆಗಾಲ ಬರುವವರೆಗೂ ಕಟ್ಟದಲ್ಲಿ ನೀರಿತ್ತು. ಈ ಕಟ್ಟ ಹಿಡಿದಿಟ್ಟ ನೀರು ಅಂದಾಜು 112.5 ಕೋಟಿ ಲೀಟರ್. ವೆಚ್ಚ ರೂ.50,000. ಸಾವಿರ ಲೀಟರ್ ನೀರಿಗೆ 45 ಪೈಸೆ ಬಿದ್ದಂತಾಯಿತು. ಹಾಗಿದ್ದ ಒಂದು ರೂಪಾಯಿಗೆ ಎರಡೂಕಾಲು ಸಾವಿರ ಲೀಟರ್ ನೀರು.**



ಡಾ. ವಾರಣಾಸಿ ಕೃಷ್ಣಮೂರ್ತಿ

ಇದನ್ನು ನಿರ್ಲಕ್ಷಿಸಿದರೆ ಇನ್ನೆಷ್ಟೋ ಕೃಷಿಕರು ಕಟ್ಟ ಕಟ್ಟಲು ಮುಂದೆ ಬಂದಾರು", ವಾರಣಾಸಿ ಸೂಚಿಸುತ್ತಾರೆ. "ಕಾಂಕ್ರೀಟ್ ಡ್ಯಾಮ್, ಕಿಂಡಿ ಅಣೆಕಟ್ಟುಗಳಿಗೆ ಹಾಕುವ ಖರ್ಚಿನ ಒಂದಂಶದಲ್ಲಿ ಇಂಥ ಕಟ್ಟಗಳು ಆಗುತ್ತವೆ. ಅಥವಾ 10 ಲಕ್ಷ ಖರ್ಚು ಮಾಡಿ ಒಂದು ಸಿಮೆಂಟ್ ಕಟ್ಟ ಕಟ್ಟುವ ಬದಲು ಇಂಥವು ಹತ್ತು ಕಟ್ಟಬಹುದು. ಸರಕಾರಿ ವೆಚ್ಚದಲ್ಲಿ ಹಳ್ಳಗಳಿಗೆ ಕಟ್ಟದ ಪ್ರಯೋಜನವಾಗುವ ದಾರಿ ತೋರಿಸಿದರೆ, ಒಂದಷ್ಟು ವರ್ಷ ನಂತರ ಹಿಂದೆಗೆದರೂ ಸಮುದಾಯಗಳು ಇದಕ್ಕೆ ಹೆಗಲು ಕೊಡಬಹುದು".

## ಮಹಾರಾಷ್ಟ್ರದ 'ಕಟ್ಟ ಕ್ರಾಂತಿ'

ಮಹಾರಾಷ್ಟ್ರದಲ್ಲಿ ಮಾಜಿ ಕೇಂದ್ರ ಸಚಿವ ಮೋಹನ್ ಧಾರಿಯಾರ 'ವನರಾಯ್ ಟ್ರಸ್ಟ್' ಎರಡು ದಶಕಗಳಿಂದ ಮರಳುಚೀಲದ ಕಟ್ಟವನ್ನು ಜನಪ್ರಿಯಗೊಳಿಸುತ್ತಿದೆ. ಈ ಅವಧಿಯಲ್ಲಿ ಇಪ್ಪತ್ತು ಲಕ್ಷಕ್ಕೂ ಹೆಚ್ಚು ಕಟ್ಟಗಳು - ಇವು ವನರಾಯ್ ಬಂಧಾರ ಎಂದೇ ಖ್ಯಾತ - ರಾಜ್ಯದಲ್ಲಿ ನಿರ್ಮಾಣವಾಗಿವೆಯಂತೆ. ಇಪ್ಪತ್ತೈದರಿಂದ 250 ಅಡಿ ಬೇಕಾಗುವ ರಚನೆಗಳಿವು. "ನಮ್ಮ ಸ್ವಯಂಸೇವಕರ ಮೂಲಕ ನಾವಿದನ್ನು ಶಾಲೆಗಳ ಎನ್ಎಸ್ಎಸ್ ಘಟಕಗಳು ಮತ್ತು ಹಳ್ಳಿಹಳ್ಳಿಗಳಲ್ಲಿ ಮಾಡಿ ತೋರಿಸುತ್ತಿದ್ದೇವೆ. ಅಕ್ಟೋಬರ್ ತಿಂಗಳು ಮೊದಲ್ಗೊಂಡು ರೈತರು ಇದನ್ನು ಕಟ್ಟುತ್ತಾರೆ. ರಾಬಿ ಬೆಳೆಗೆ ದೊಡ್ಡ ಪ್ರಯೋಜನ ಸಿಗುತ್ತಿದೆ. ಇದು ಕಳೆದ ಐದಾರು ವರ್ಷಗಳಲ್ಲಂತೂ ರಾಜ್ಯವ್ಯಾಪಿಯಾಗಿ ಹಬ್ಬಿದೆ. ಇದನ್ನು ಸರಕಾರ ಅಂಗೀಕರಿಸಲು 18 ವರ್ಷವೇ ಹಿಡಿಯಿತು. 2006ರಲ್ಲಿ ರಾಜ್ಯ ಸರಕಾರದ ಮಹಾತ್ಮ ಫುಲೆ ನೆಲಜಲ ಸಂರಕ್ಷಣಾ ಅಭಿಯಾನದಡಿ ಎರಡು

**ಕೊಳವೆಬಾವಿ ತೋಡಿಸುವುದಕ್ಕಿಂತ ಕಟ್ಟ ಕಟ್ಟುವುದು ಉತ್ತಮ ಎನ್ನುವ ಭಾವನೆ ಇದೆ.**



ಲಕ್ಷಕ್ಕೂ ಹೆಚ್ಚು ಇಂಥ ಬಂಧಾರಗಳನ್ನು ಕಟ್ಟಿದ್ದಾರೆ. ತಾತ್ಕಾಲಿಕವಾದರೂ ತಮ್ಮ ಸಿಮೆಂಟ್ ಅಣೆಕಟ್ಟೆಗೆ ಆಗುವ ಖರ್ಚು, ವಿಳಂಬದೆದುರು ಇದು ಎಷ್ಟೋ ಮೇಲು ಎಂಬುದು ಈಗ ಸರಕಾರಕ್ಕೂ ಅರ್ಥವಾಗಿದೆ" ಎನ್ನುತ್ತಾರೆ ಟ್ರಸ್ಟ್ ನಿರ್ದೇಶಕ ಪ್ರಕಾಶ್ ಜಗ್‌ತಾಪ್.

ಉದ್ಯೋಗ ಭರವಸೆ ಯೋಜನೆಯಡಿ ಕಾಸರಗೋಡಿನ ಎಣ್ಮಕಜೆ ಗ್ರಾಮದಲ್ಲಿ ಮೂರು ದೊಡ್ಡ ಮರಳ ಚೀಲದ ಕಟ್ಟ ಕಟ್ಟಿದ್ದಾರೆ. ಸರಕಾರಿ ವೆಚ್ಚದಲ್ಲಿ ಊರಿನಲ್ಲಿ ಕಟ್ಟ ಪ್ರೀತಿ ಹುಟ್ಟಿಸುವುದು ಪಂಚಾಯತ್ ಸದಸ್ಯ ಐತಪ್ಪ ಕುಲಾಲರ ಲಕ್ಷ್ಯ. "ಹೆಚ್ಚು ಕಾಲ ಉಳಿಯುವ ಕೆಲಸ ಮಾಡಬೇಕೆನ್ನುವ ಶರ್ತದ ಕಾರಣ ಈ ತಾತ್ಕಾಲಿಕ ರಚನೆಗಳಿಗೆ ಅನುಮತಿ ನೀಡಲು ತೊಡಕಿದೆ. ಇಲ್ಲಿನ ಪಂಚಾಯತುಗಳ ಒತ್ತಡದಿಂದ ಕಾಸರಗೋಡು ಜಿಲ್ಲೆಯಲ್ಲಿ ಮಾತ್ರ ವಿಶೇಷ ಅನುಮತಿ ಕೊಟ್ಟಿದ್ದಾರೆ" ಎನ್ನುವುದು ಯೋಜನೆಯ ಜಿಲ್ಲಾ ಸಹಾಯಕ ಕಾರ್ಯಕ್ರಮ ಸಮನ್ವಯಕಾರ ವಿ. ಮಧುಸೂದನನ್ ವಿವರಣೆ.

ಮಹಾರಾಷ್ಟ್ರದಲ್ಲಿ ಅಷ್ಟೊಂದು ದೊಡ್ಡ ರೀತಿಯಲ್ಲಿ, ಜಿಲ್ಲಾಧಿಕಾರಿಗಳದೇ ನೇತೃತ್ವದಲ್ಲಿ ಇದೇ ಯೋಜನೆಯಡಿ ತಾತ್ಕಾಲಿಕ ಕಟ್ಟಗಳ ರಚನೆಯಾಗುತ್ತಿದೆ. ಅಂದ ಮೇಲೆ ಇಲ್ಲೇಕೆ ನಿಯಮಾವಳಿಗಳ ಅಡ್ಡಿ?

ಸಾಮುದಾಯಿಕ ಸಹಭಾಗಿತ್ವಕ್ಕೆ ಒಳ್ಳೆ ಅವಕಾಶವಿರುವ, ಕೃಷಿಯಿಂದ ಕುಡಿವ ನೀರಿನವರೆಗೆ ಸುತ್ತಲಿನ ಸಮಾಜಕ್ಕೆಲ್ಲಾ ಉಪಯೋಗಿ ಆಗುವ ಈ ಕಡೆಗಟ್ಟುಗಳು ಇನ್ನೂ ಹೆಚ್ಚೆಚ್ಚು ಮೇಲೇಳಲಿ. ಆಡಳಿತ ಈ ಕಡೆಗೆ ಕಣ್ಣು ತೆರೆಯಲಿ. ಮಹಾರಾಷ್ಟ್ರದ 'ಕಟ್ಟ ಕ್ರಾಂತಿ' ಇಲ್ಲಿಗೂ ಹಬ್ಬಲಿ.

(ಡಾ. ವಾರಣಾಸಿ ಕೃಷ್ಣಮೂರ್ತಿ (08255) 270 254,
info@varanashi.com;

[illegible] (08251) 288 464;

ವನರಾಯ್ ಟ್ರಸ್ಟ್ (020) 2444 5299 , vanaraitrust@gmail.com)



ಹಿಟಾಚಿ ಬಳಸಿ ಬರೀ ಮರಳ ಕಟ್ಟ ರಚನೆ (ಚಿತ್ರ : ವಾರಣಾಸಿ ಅಗ್ರಿ ಫೌಂಡೇಶನ್)